ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೧೫ನೇ ಜೂನ್ ೧೯೮೮, ಜ್ಯೇಷ್ಠ ೨೫, ಶಕ ೧೯೧೦.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆ ೧೨ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದ್ದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲಾವಿದರುಗಳಿಗೆ ಮಾಸಾಶನ

೧೬೭೫. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೮೬–೮೭, ೧೯೮೭–೮೮ರಲ್ಲಿ ಎಷ್ಟು ಕಲಾವಿದರಿಗೆ ಮಾಸಾಶನ ಕೊಡಲಾಗಿದೆ ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಲಾವಿದರು ಈ ಅವಧಿಯಲ್ಲಿ ಮಾಸಾಶನ ಪಡೆದಿರುತ್ತಾರೆ ? (ಅವರ ಹೆಸರು ಮತ್ತು ವಿಳಾಸ ಒದಗಿಸುವುದು)

ಇ) ಇನ್ನು ಮುಂದೆಯೂ ಈ ಮಾಸಾಶನವನ್ನು ಸೂಕ್ತ ಕಲಾವಿದರಿಗೆ ಕೊಡಲಾಗುವುದೆ ಹಾಗೂ ಈ ಮೊತ್ತವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬಿಡಿಎ ಸಚಿವರು),—

ಅ) ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಶಿಫಾರಸ್ಸಿನ ಮೇರೆಗೆ ೧೯೮೬–೮೭ನೇ ಸಾಲಿನಲ್ಲಿ ೫೭ ಜನ ಜಾನಪದ ಕಲಾವಿದರಿಗೆ ಮಾಸಾಶನ ಕೊಡಲಾಗಿದೆ. ೧೯೮೭–೮೮ನೇ ಸಾಲಿಗೆ ಇನ್ನೂ ಮಂಜೂರು ಮಾಡಿರುವುದಿಲ್ಲ.

ಆ) ೧೯೮೬–೮೭ನೇ ಸಾಲಿನಲ್ಲಿ ಇಬ್ಬರು ಜಾನಪದ ಕಲಾವಿದರಿಗೆ ಮಾಸಾಶನ ನೀಡಲಾಗಿದೆ. ಅವರುಗಳೆಂದರೆ.—

೧ ಶ್ರೀ ರಾಮಪಪ್ಪು ಮೆಂದನ್,
ಬೊಮ್ಮಟ ಬೆಟ್ಟು ಗ್ರಾಮ, ಕುಂದಾಪುರ, ದಕ್ಷಿಣ ಕನ್ನಡ ಜಿಲ್ಲೆ.

೨ ಶ್ರೀ ಶೇನ್‌ಕೊಠಾರಿ, ಬಿನ್ ಶೇಷ ಕೊಠಾರಿ,
ತೆಂಕಬೆಟ್ಟು, ಉಳ್ಳೂರು ಗ್ರಾಮ, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ಇ) ಹೌದು ಮಾಸಾಶನವನ್ನು ಹೆಚ್ಚಿಸುವ ವಿಚಾರ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ಜಾನಪದ ಯಕ್ಷಗಾನ ಕಲಾವಿದರಿಗೆ ಮಾಸಾಶನವನ್ನು ಕೊಡುವುದಕ್ಕೆ ಯಾವುದಾದರೂ ನೀತಿ ನಿಯಮಗಳೇನಾದರೂ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಮಾಸಾಶನಗಳನ್ನು ಕೊಡುವುದಕ್ಕೆ ಪಂಂಜೆ ಕನ್ನಡ ಸಂಸ್ಕೃತಿ ಇಲಾಖೆಯವರು ಅರ್ಜಿಗಳನ್ನು ಕರೆಯುತ್ತಾರೆ. ಅರ್ಜಿಗಳನ್ನು ಕರೆಯುತಕ್ಕಂಥ ಸಂದರ್ಭಗಳಲ್ಲಿ ಅವರು ೫೮ ವರ್ಷಕ್ಕಿಂತ ಮೊದಲಿದವರಾಗಿರಬೇಕು. ಅವರ ಆದಾಯ ವರ್ಷಕ್ಕೆ ಳಿ೧೦ ರೂಪಾಯಿಗೂ ಕಡಿಮೆ ಇರುವ ಪಟ್ಟಿಯನ್ನು ಲಗತ್ತಿಸಬೇಕು. ಇವೆಲ್ಲವೂ ಆದ ನಂತರ ಜಿಲ್ಲಾಧಿಕಾರಿಗಳಿಗೆ ಈ ರೀತಿ ಬಂದಿರತಕ್ಕಂಥ ಅರ್ಜಿಗಳನ್ನು ವಿಚಾರಣೆಗಾಗಿ ಕಳುಹಿಸಲಾಗುವುದು. ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಇದರ ಬಗ್ಗೆ ವಿಚಾರ ಮಾಡಿ ಅವರು ನಿಜವಾಗಿ ಕಷ್ಟದ ಸ್ಥಿತಿಯಲ್ಲಿದ್ದಾರೆ ಎಂದು ಕಂಡು ಬಂದರೆ ಆ ಶಿಫಾರಸ್ಸನ್ನು ಸರ್ಕಾರವು ನೇರವಾಗಿ ಮತ್ತು ಅನೇಕ ಸಂದರ್ಭಗಳಲ್ಲಿ ಈ ಅಕಾಡೆಮಿಗಳು ಶಿಫಾರಸ್ಸು ಮಾಡತಕ್ಕಂಥವರ ಸಾದರ್ಶನವನ್ನು ತೆಗೆದುಕೊಂಡು ಕಷ್ಟದ ಸ್ಥಿತಿಯಲ್ಲಿದ್ದಾರೆ ಎಂದು ಕಂಡು ಬಂದರೆ ಅವೆರಡನ್ನೂ ಕ್ರೋಢೀಕರಿಸಿ ಸರ್ಕಾರವು ಮಾಸಾಶನವನ್ನು ಮಂಜೂರು ಮಾಡುತ್ತದೆ.

ಶ್ರೀ ಬಿ. ಎಂ. ಇದಿನಬ್ಬ,—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ೧೯೮೬-೮೭ರಲ್ಲಿ ೫೭ ಜನ ಕಲಾವಿದರಿಗೆ ಮಾಸಾಶನವನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ೧೯೮೭-೮೮ನೇ ಸಾಲಿನಲ್ಲಿ ಮಾಸಾಶನವನ್ನು ಮಂಜೂರು ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ೧೯೮೭-೮೮ ಆಗಿದೆ. ಇನ್ನಾದರೂ ಅದನ್ನು ಮಂಜೂರು ಮಾಡುತ್ತಾರೋ ಇಲ್ಲವೋ ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಮಾಸಾಶನವನ್ನು ಪ್ರತಿವರ್ಷ ಕೊಡತಕ್ಕಂಥದ್ದು ಇದೆ. ೧.೨೯ ಲಕ್ಷ ರೂಪಾಯಿ ಪ್ರತಿವರ್ಷ ಕಲಾವಿದರ ಮಾಸಾಶನಕ್ಕಾಗಿ ಹೋಗುತ್ತಿದೆ. ಈ ವರ್ಷದಲ್ಲಿ ಅಂದರೆ ಕಳೆದ ನವೆಂಬರ್ ಒಂದನೇ ತಾರೀಖು ಈ ಪಟ್ಟಿ ಬಿಡುಗಡೆಯಾಗಬೇಕಾಗಿತ್ತು. ಅದು ಆಗಲಿಲ್ಲ. ಈ ತಿಂಗಳ ಅಂತ್ಯಭಾಗ ಇಲ್ಲವೇ ಜುಲೈ ಮೊದಲನೇ ವಾರದಲ್ಲಿ ಪಟ್ಟಿ ಅಂತ್ಯವಾಗಿ ಹೊರಬೀಳಲಿದೆ, ಮಾಸಾಶನವನ್ನು ಕೊಡುವುದನ್ನು ಕೈಬಿಡುವುದಿಲ್ಲ.

ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇರುವ ಖಾಯಂ, ಅರೆ ಖಾಯಂ ಮತ್ತು ಸಂಚಾರಿ ಚಿತ್ರಮಂದಿರಗಳೆಷ್ಟು ?

ಆ) ರಾಜ್ಯದಲ್ಲಿ ತಯಾರಾಗುವ ಕನ್ನಡ ಚಿತ್ರಗಳ ಸಂಖ್ಯೆ ಎಷ್ಟು ?

ಇ) ಕಳೆದ ಮೂರು ವರ್ಷಗಳಲ್ಲಿ ಕನ್ನಡ ಚಿತ್ರಗಳಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬಂದ ಆದಾಯವೆಷ್ಟು ?

ಈ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಕನ್ನಡ ಚಲನಚಿತ್ರಗಳಿಗೆ ನೀಡಲಾದ ಸಹಾಯ ಧನವೆಷ್ಟು ?

ಉ) ಚಲನಚಿತ್ರ ನಿರ್ಮಾಪಕರಿಗೆ ನೀಡಬೇಕಾಗಿರುವ ಸಹಾಯ ಧನವನ್ನು ಏನಾದರೂ ಸರ್ಕಾರ ಬಾಕಿ ಉಳಿಸಿಕೊಂಡಿದೆಯೇ ?

ಊ) ಹಾಗಿದ್ದಲ್ಲಿ, ಈ ಹಣವನ್ನು ಯಾವಾಗ ನೀಡಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬಿ.ಡಿ.ಎ. ಸಚಿವರು).—

ಅ) ಖಾಯಂ ಚಿತ್ರಮಂದಿರಗಳು : ೫೭.

ಅರೆ ಖಾಯಂ ಚಿತ್ರ ಮಂದಿರಗಳು : ೩೩.

ಸಂಚಾರಿ ಚಿತ್ರಮಂದಿರಗಳು : ೭೭